5C.R.P.67

| |
|---|
| Form No.4 (Civil) Deposition Sheets (R.P.No.57) |

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 127/2022

ದಿನಾಂಕ ಃ 22.08.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 13 ಪಿ. ಡಬ್ಲ್ಯೂ: 13

| | |
|---|---|
| ಸಾಕ್ಷಿದಾರರ ಹೆಸರು | ಎಸ್ ಎನ್ ಮಹೇಶ |
| ತಂದೆಯ ಹೆಸರು | ವೆಂಕಟೇಶ ಅಲಿಯಾಸ್ ನಟರಾಜಪ್ಪ |
| ವಯಸ್ಸು | 51 ವರ್ಷ |
| ಉದ್ಯೋಗ | ರಿಯಲ್ ಎಸ್ಟೇಟ್ |
| ವಾಸ | ಮೈಸೂರು |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಮೃತೆ ಶಾಂತಮ್ಮ ನನ್ನ ತಾಯಿ. ಫ್ರಾಸಾ. 2 ರವರು ನನ್ನ ಅತ್ತಿಗೆ. ಫ್ರಾಸಾ. 3 ರವರು ನನ್ನ ಅಣ್ಣ. ಫ್ರಾಸಾ. 4 ಮತ್ತು 5 ರವರು ಗೊತ್ತು, ಅವರು ನಮ್ಮ ಊರಿನವರು. ನಾನು ಮೂಲತಃ ಮಳವಳ್ಳಿ ತಾಲೂಕಿನ ಕಿರುಗಾವಲಿನ ಸುಜ್ಜಲೂರು ಊರಿನವನಾಗಿರುತ್ತೇನೆ. ಪ್ರಸ್ತತ ನಾನು ಮೈಸೂರಿನಲ್ಲಿ ವಾಸವಾಗಿರುತ್ತೇನೆ.
2. 2022 ನೇ ಸಾಲಿನಲ್ಲಿ ನನ್ನ ತಾಯಿ ಶಾಂತಮ್ಮ ಮೃತರಾಗಿರುತ್ತಾರೆ. ಆ ಸಮಯದಲ್ಲಿ ಅವರಿಗೆ 84 ರಿಂದ 85 ವರುಷವಾಗಿತ್ತು. ಸದರಿ ಸಮಯದಲ್ಲಿ ಶಾಂತಮ್ಮ ರವರು ಫ್ರಾಸಾ. 2 ಮತ್ತು 3 ರವರ ಜೊತೆ ವಾಸಿಸುತ್ತಿದ್ದರು.
3. ರಾತ್ರಿ 9.00 ಗಂಟೆ ಸಮಯದಲ್ಲಿ ಫ್ರಾಸಾ. 2 ರವರು, ನನಗೆ ಫೋನ್ ಮಾಡಿ , ತಮ್ಮ ಅತ್ತೆ ಪ್ರಜ್ಞೆ ತಪ್ಪಿದ್ದಾರೆ ಅವರನ್ನು ಮೈಸೂರಿಗೆ ಕರೆದುಕೊಂಡು ಹೋಗುತ್ತಿದ್ದೇವೆ ಎಂದು ಹೇಳಿರುತ್ತಾರೆ. ಮೈಸೂರಿನ ಕಾವೇರಿ ಆಸ್ಪತ್ರೆಗೆ ನನ್ನ ತಾಯಿಯನ್ನು ಫ್ರಾಸಾ. 4 ಮತ್ತು 5

ರವರು ಕರೆದುಕೊಂಡು ಬಂದಿರುತ್ತಾರೆ. ನಾನು ಸದರಿ ಆಸ್ಪತ್ರೆಗೆ ಹೋಗಿದ್ದೆನು. ನನ್ನ ತಾಯಿ ಶಾಂತಮ್ಮ ರವರಿಗೆ ಪ್ರಜ್ಞೆ ತಪ್ಪಿತ್ತು , ಅವರು ಮಾತನಾಡುತ್ತಿರಲಿಲ್ಲ, ಅವರು ತುರ್ತು ಚಿಕಿತ್ಸಾ ವಿಭಾಗದಲ್ಲಿ ಇದ್ದರು. ನಂತರ ಶಾಂತಮ್ಮ ರವರನ್ನು ಐಸಿಯು ಗೆ ದಾಖಲಿಸಿರುತ್ತಾರೆ. ಮರು ದಿನ ಮಧ್ಯಾಹ್ನ ಸುಮಾರು 12.00 ಗಂಟೆ ಸಮಯದಲ್ಲಿ ನನ್ನ ತಾಯಿ ಶಾಂತಮ್ಮನವರು ತೀರಿಕೊಂಡಿರುತ್ತಾರೆ.

4. ನಮ್ಮ ಮನೆಯ ಎದುರುಗಡೆ ಇರುವ ಚಂದ್ರಶೇಖರ ರವರು, ನಮ್ಮ ತಾಯಿಗೆ ಹಾಲಿನಲ್ಲಿ ನಿದ್ರೆ ಮಾತ್ರೆಯನ್ನು ನೀಡಿದ್ದರೆಂದು ನನಗೆ ಗೊತ್ತಾಗಿರುತ್ತದೆ. ನಮ್ಮ ತಾಯಿ ಶಾಂತಮ್ಮ ರವರ ಮೈ ಮೇಲೆ ಇದ್ದ ಚಿನ್ನಾಭರಣಗಳನ್ನು ಕದಿಯುವ ಉದ್ದೇಶದಿಂದ ಚಂದ್ರಶೇಖರವರು ಆ ರೀತಿ ಮಾಡಿರುತ್ತಾರೆ. ಸಾಮಾನ್ಯವಾಗಿ ನನ್ನ ತಾಯಿ, ಒಂದು ಸರ, ಕೈ ಬಳೆ, ಓಲೆಗಳು, ಮಾಟಿಯನ್ನು ಹಾಕಿಕೊಳ್ಳುತ್ತಿದ್ದರು.ನನ್ನ ತಾಯಿ ತೀರಿಕೊಳ್ಳುವ 3 ದಿನಗಳ ಹಿಂದೆ ಚಾಮರಾಜನಗರದಲ್ಲಿ, ನನ್ನ ಚಿಕ್ಕಮ್ಮ ತೀರಿಕೊಂಡಿದ್ದರು, ಆಗ ನಾನು ಅವರನ್ನು ಅಲ್ಲಿ ನೋಡಿದ್ದೆನು. ಸದರಿ ಸಮಯದಲ್ಲಿ ನಾನು ಸದರಿ ಒಡವೆಗಳನ್ನು ಗಮನಿಸಿದ್ದೇನೆ. ನನ್ನ ತಾಯಿ ಸದರಿ ಒಡವೆಗಳನ್ನು ಯಾವಾಗಲೂ ಹಾಕಿಕೊಳ್ಳುತ್ತಿದ್ದರು.

5. ದಿನಾಂಕ 26 ರಂದು, ಸದರಿ ಚಂದ್ರಶೇಖರ ರವರು ನನ್ನ ತಾಯಿಯ ಒಡವೆಗಳನ್ನು ಇರಿಸಿಕೊಂಡಿದ್ದಾರೆಂದು ನನಗೆ ಗೊತ್ತಾಗಿರುತ್ತದೆ. ನನ್ನ ತಾಯಿಯ ಮರಣದ 15 ದಿನಗಳ ನಂತರ ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ.

6. 3 ರಿಂದ 4 ತಿಂಗಳಿಗೊಮ್ಮೆ ನಾನು ಕಿರುಗಾವಲಿಗೆ ಬರುತ್ತಿದ್ದೆನು. ಚಂದ್ರಶೇಖರ ರವರು ನಮ್ಮ ಮನೆಯ ಎದುರುಗಡೆ ಟೈಲರಿಂಗ್ ಕೆಲಸ ಮಾಡುತ್ತಾರೆ. ಅವರನ್ನು ನಾನು ನೋಡಿದ್ದೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎನ್ ಕೆ ಎಸ್ ವಕೀಲರಿಂದಃ**

7. ಕಳೆದ 35 ವರುಷಗಳಿಂದ ನಾನು ಮೈಸೂರಿನಲ್ಲಿ ವಾಸಿಸುತ್ತಿದ್ದೇನೆ. ನಾನು 1 ನೇ ತರಗತಿಯಿಂದ 7 ನೇ ತರಗತಿ ತನಕ ಸುಜ್ಜಲೂರಿನಲ್ಲಿ ಓದಿರುತ್ತೇನೆ. ಸದರಿ ಸಮಯದಲ್ಲಿ ನಾನು ಸುಜ್ಜಲೂರಿನಲ್ಲಿಯೇ ವಾಸವಿದ್ದೆನು. ನಮ್ಮ ಕುಟುಂಬವು ಅಲ್ಲಿ ನಮಗೆ ಇದ್ದ ಜಮೀನಿನಲ್ಲಿ ವಾಸವಿತ್ತು. ನಮ್ಮ ಅಣ್ಣನಿಗೆ ಪೋಸ್ಟಲ್ ಕೆಲಸ ಇದ್ದುದರಿಂದ ಹಾಗೂ ವಿದ್ಯಾಭ್ಯಾಸಕ್ಕೆ ನಾವು ಕಿರುಗಾವಲಿಗೆ ಬಂದಿರುತ್ತೇವೆ. ಪ್ರಾಸಾ.2 ಮತ್ತು 3 ರವರ

ಮನೆಯಲ್ಲಿ ನಾನು ಯಾವತ್ತೂ ವಾಸ ಮಾಡಿಲ್ಲ ಎಂದರೆ ಸಾಕ್ಷಿಯು ಹಬ್ಬ ಹಾಗೂ ಸಮಾರಂಭಗಳಿಗೆ ನಾನು ಬಂದು ಹೋಗುತ್ತಿದ್ದಾಗ ಫ್ರಾಸಾ. 2 ಮತ್ತು 3 ರವ ಮನೆಯಲ್ಲಿ ಉಳಿದುಕೊಳ್ಳುತ್ತಿದ್ದೆನು.

8. ನನಗೆ ಫ್ರಾಸಾ.2 ರವರು ತಮ್ಮ ಅತ್ತೆ ಪ್ರಜ್ಞೆ ತಪ್ಪಿದ್ದಾರೆ ಎಂದು ಫೋನ್ ಮಾಡಿದಾಗ, ಅವರು ಕಿರುಗಾವಲಿನಲ್ಲಿ ಇದ್ದರು. ಸದರಿ ನಮ್ಮ ತಾಯಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ಕಾರಿನ ಬಣ್ಣ ನನಗೆ ಗ್ತೊತ್ತಿಲ್ಲ. ಸದರಿ ಕಾರಿನ ನಂಬರ್ ನ್ನು ನಾನು ತಿಳಿದುಕೊಂಡಿಲ್ಲ.

9. ಸದರಿ ನಮ್ಮ ತಾಯಿ ಶಾಂತಮ್ಮ ರವರು ಯಾವಾಗಲೂ ಬಳೆಯನ್ನು ಹಾಕಿಕೊಳ್ಳುತ್ತಿದ್ದರು. ಸಾಕ್ಷಿಯು ಮುಂದುವರೆದು, ಬಳೆ ಟೈಟ್ ಆಗಿದ್ದಾಗ ಅದನ್ನು ತೆಗೆದಿರಿಸುತ್ತಿದ್ದರು, ಸರವನ್ನು ಯಾವಾಗಲೂ ಹಾಕಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ಸದರಿ ನಮ್ಮ ತಾಯಿಯ ಒಡವೆಗಳ ಬಗ್ಗೆ ಪೂರ್ಣವಾಗಿ ಗೊತ್ತು. ಅವರು ಹಾಕಿಕೊಳ್ಳುತ್ತಿದ್ದ ಓಲೆಯ ಕಲ್ಲಿನ ಬಣ್ಣ ಬಿಳಿಯದ್ದಾಗಿತ್ತು. ಸದರಿ ನಮ್ಮ ತಾಯಿಯ ಉಂಗುರದಲ್ಲಿ ಹಸಿರು ಬಣ್ಣದ ಕಲ್ಲು ಇದ್ದಿರುತ್ತದೆ. ಸಾಮಾನ್ಯವಾಗಿ ನಮ್ಮ ತಾಯಿ ಸ್ನಾನ ಮಾಡುವ ಸಮಯದಲ್ಲಿ ಒಡವೆಗಳನ್ನು ಬಿಚ್ಚಿ ಇಡುತ್ತಿದ್ದರು ಎಂದರೆ ಸಾಕ್ಷಿಯು ಅದನ್ನು ನಾನು ನೋಡಿಲ್ಲ ಎನ್ನುತ್ತಾರೆ. ಸದರಿ ಒಡವೆಗಳ ಬಗ್ಗೆ ನನ್ನ ತಾಯಿ ಯಾವತ್ತೂ ದೂರು ಹೇಳಿಲ್ಲ.

10. ಕಿರುಗಾವಲಿನಲ್ಲಿ ಪ್ರಥಮ ಚಿಕಿತ್ಸೆ ಮಾಡಿಸಲು ಸದರಿ ರಾತ್ರಿ 9.00 ಗಂಟೆ ಸಮಯದಲ್ಲಿ ಯಾರು ಇರುವುದಿಲ್ಲ, ನಮಗೆ ಮೈಸೂರು ಹತ್ತಿರವಿರುತ್ತದೆ. ಸದರಿ ನಮ್ಮ ತಾಯಿಯನ್ನು ಫ್ರಾಸಾ.4 ಮತ್ತು 5 ರವರು ಆಸ್ಪತ್ರೆಗೆ ಕರೆದುಕೊಂಡು ಬಂದಾಗ, ಕಾರಿನಲ್ಲಿ ಎಲ್ಲಿ ಕೂರಿಸಿಕೊಂಡಿದ್ದರೆಂದು ನನಗೆ ಗೊತ್ತಿಲ್ಲ. ನಾನು ಬರುವಷ್ಟರಲ್ಲಿ ನಮ್ಮ ತಾಯಿ ತುರ್ತು ಚಿಕಿತ್ಸಾ ವಿಭಾಗದಲ್ಲಿ ಇದ್ದರು.

11. ದಿನಾಂಕ 26 ರಂದು, ಸದರಿ ಕೃತ್ಯವನು ಆರೋಪಿಯೇ ಮಾಡಿದ್ದಾರೆ ಎಂದು ಪೊಲೀಸರು ಹಾಗೂ ಫ್ರಾಸಾ. 2 ರವರು ನನಗೆ ಹೇಳಿದ್ದರು. ಸದರಿ ನಿದ್ರೆ ಮಾತ್ರೆ, ಯಾವ ಕಂಪನಿಯ ನಿದ್ರೆ ಮಾತ್ರೆ ಎಂದು ನನಗೆ ಗೊತ್ತಿಲ್ಲ. ನಿದ್ರೆ ಮಾತ್ರೆಯನ್ನು ಹಾಲಿನಲ್ಲಿ ಹಾಕಿ ನನ್ನ ತಾಯಿಗೆ ಆರೋಪಿ ನೀಡಿದ್ದರೆಂದು ನನಗೆ ಗೊತ್ತಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ಜಗಳವಾಗಿ, ನನ್ನ ತಾಯಿ ಬಿ.ಪಿ. ಮಾತ್ರೆಯನ್ನು ತೆಗೆದುಕೊಂಡು, ಓವರ್ ಡೋಸ್ ಆಗಿ ಮೃತರಾಗಿರುತ್ತಾರೆ ಎಂದರೆ ಸರಿಯಲ್ಲ.

12. ಪೊಲೀಸ್ ಠಾಣೆಗೆ ಹೇಳಿಕೆಯನ್ನು ಕೊಡಲು ನಾನು ಒಬ್ಬನೇ ಹೋಗಿದ್ದೆನು. ಅಲ್ಲಿ ನನ್ನ ಸಹಿಯನ್ನು ಪಡೆದಿಲ್ಲ. ನಾನು ಮೈಸೂರಿನಲ್ಲಿ ಇರುವುದರಿಂದ, ನನಗೆ ಯಾವುದೇ ವಿಚಾರವು ತಿಳಿದಿಲ್ಲ, ಫ್ರಾಸಾ.2 ರವರು ಹೇಳಿದುದನ್ನು ನಂಬಿಕೊಂಡು, ಅವರು ಹೇಳಿಕೊಟ್ಟಂತೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.